(15)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: **2016-17ನೇ** ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಅನಿಲ ಯೋಜನೆಯಡಿ ರಾಜ್ಯ ಸಹಾಯಧನ ಬಿಡುಗಡೆ ಕುರಿತು.

ಓದಲಾಗಿದೆ: **ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 48 ಜೈಅಯೋ 2016, ದಿನಾಂಕ 15.12.2016, 23.07.2016 & 27.08.2016.**

## ಪ್ರಸ್ತಾವನೆ :

**2016-17ನೇ** ಸಾಲಿನ ರಾಜ್ಯ ಆಯವ್ಯಯದ **ಲೆಕ್ಕ ಶೀರ್ಷಿಕೆ 2810-01-198-1-01-300 (Lumpsum)** ರಡಿಯಲ್ಲಿ **ರೂ.150.00** ಲಕ್ಷಗಳನ್ನು ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ನಿರ್ಮಿಸಲಾದ ಜೈವಾನಿಲ ಸ್ಥಾವರಗಳಿಗೆ ಹಿಂದಿನ ಸಾಲುಗಳ ಬಾಕಿ ರಾಜ್ಯ ಸಹಾಯಧನ ಪಾವತಿಗಾಗಿ **ಅನಿಲ ಯೋಜನೆಯಡಿ** ನಿಗದಿಪಡಿಸಿದೆ. ಈಗಾಗಲೇ **ರೂ.142.62ಲಕ್ಷ**ಗಳನ್ನು ಮೇಲೆ ಓದಲಾದ ಆದೇಶಗಳಲ್ಲಿ ಸಂಬಂಧಿತ ಜಿಲ್ಲೆಗಳಿಗೆ ಬಿಡುಗಡೆ ಮಾಡಿದೆ. ಈ ಪೈಕಿ ಬಾಕಿ ಉಳಿದ ರೂ.7.38ಲಕ್ಷಗಳನ್ನು 2016-17ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ನವೆಂಬರ್ 2016ರ ಅಂತ್ಯದವರೆಗಿನ ಪ್ರಗತಿ ಹಾಗೂ ಜಿಲ್ಲೆ ಪಂಚಾಯತಿಯ ಬೇಡಿಕೆ ಆಧರಿಸಿ ಬೀದರ್, ಕಲಬುರಗಿ ಮತ್ತು ಬೆಳಗಾವಿ ಜಿಲ್ಲೆಗಳಿಗೆ **ಲೆಕ್ಕ ಶೀರ್ಷಿಕೆ 2810-01-198-1-01-300**ರಡಿ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/48/ಜೈಅಯೋ/2016, ಬೆಂಗಳೂರು, ದಿನಾಂಕ 17.12.2016**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, **2016-17ನೇ** ಸಾಲಿನಲ್ಲಿ, ಕಾರ್ಯಕ್ರಮದಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಲಭ್ಯವಿರುವ ಅನುದಾನಕ್ಕೆ ಮಿತಿಗೊಳಿಸಿ ಅನಿಲ ಯೋಜನೆಯಡಿ ರಾಜ್ಯ ಸಹಾಯಧನ **ರೂ.7.38ಲಕ್ಷ**(ಏಳು ಲಕ್ಷದ ಮೂವತ್ತೆಂಟು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಕೆಳಕಂಡ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

| ಕ್ರಸಂ | ಜಿಲ್ಲಾ ಪಂಚಾಯತ್ | ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಬೀದರ್ | 3.69 |
| 2 | ಕಲಬುರಗಿ | 2.21 |
| 3 | ಬೆಳಗಾವಿ | 1.48 |
| | **ಒಟ್ಟು** | **7.38** |

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗುತ್ತಿದ್ದು, ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಹಾಗೂ ವ್ಯಪಗತ ಮಾಡತಕ್ಕದಲ್ಲ. **ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಸದರಿ ಅನುದಾನವನ್ನು ಗಾಂಧಿ ಸಾಕ್ಷಿ ಕಾಯಕದಡಿ ಇಂಧೀಕರಿಸಿ ಬಿಡುಗಡೆ ಮಾಡತಕ್ಕದ್ದು.**

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ **2810-01-198-1-01-300**ರಡಿ ವೆಚ್ಚ ಭರಿಸಿ, ನಿಗದಿತ ನಮೂನೆಯಲ್ಲಿ ಹಣಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ನೀಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 03 ಟಿಎಫ್‌ಪಿ 2016 ದಿನಾಂಕ 02.04.2016ರನ್ವಯ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದಡಿ ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ: ಗ್ರಾಅಪ 544 ಪಿಬಿಎಸ್ 2016, ದಿನಾಂಕ 26.11.2016ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ:ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೀದರ್, ಬೆಳಗಾವಿ ಮತ್ತು ಕಲಬುರುಗಿ.
3. ಜಿಲ್ಲಾ ಖಜಾನಾಧಿಕಾರಿಗಳು, ಬೀದರ್, ಬೆಳಗಾವಿ ಮತ್ತು ಕಲಬುರುಗಿ.
4. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್ ನಂ. 49, ಸೆಕೆಂಡ್ ಬ್ಲಾಕ್, ಸೆಕೆಂಡ್ ಫ್ಲೋರ್, ಖನಿಜ ಭವನ, ಸೌತ್ ಎಂಟ್ರನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಸರ್ಕಾರದ ಪ್ರದಾನ ಕಾರ್ಯದರ್ಶಿಗಳು (ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.